## 1994-95ನೇ ಸಾಲಿನಲ್ಲಿ ರಾಜ್ಯದಲ್ಲಿ ನೂತನ ಖಾಸಗೀ ಪದವಿ ಪೂರ್ವ ಕಾಲೇಜುಗಳ

### ಮಂಜೂರಾತಿ ಪಟ್ಟಿ:ಅನುಬಂಧ

### ಅನುಬಂಧ -

**ಬೆಂಗಳೂರು ಜಿಲ್ಲೆ**

| | | |
|---|---|---|
| 1) | ಪರಮಹಂಸ ಫೌಂಡೇಷನ್, ಜಯನಗರ, ಬೆಂಗಳೂರು | ಜಯನಗರ, ಬೆಂಗಳೂರು |
| 2) | ಜಯನಗರ ಸಿ.ಹೆಚ್.ಡಿ.ಲಿಮಿಟೆಡ್ ಜಯನಗರ, ಬೆಂಗಳೂರು | ಜಯನಗರ, ಬೆಂಗಳೂರು |
| 3) | ಆಕ್ಸ್‌ಫರ್ಡ್ ಇಂಗ್ಲೀಷ್ ಶಾಲೆ, ವಿಜಯನಗರ, ಬೆಂಗಳೂರು | ವಿಜಯನಗರ, ಬೆಂಗಳೂರು |
| 4) | ಸೆಕ್ರೆಡ್ ಆರ್ಟ್ ಬಾಲಕಿಯರ ಪ್ರೌಢಶಾಲೆ, ಜೀವನಭೀಮನಗರ, ಬೆಂಗಳೂರು | ಜೀವನಭೀಮಾ ನಗರ, ಬೆಂಗಳೂರು |
| 5) | ಬಿ.ಇ.ಟಿ.ಎಜುಕೇಷನ್ ಸೊಸೈಟಿ, ಬಿಸ್ಮಿಲ್ಲಾನಗರ, ಬೆಂಗಳೂರು | ಬಿಸ್ಮಿಲ್ಲಾನಗರ, ಬೆಂಗಳೂರು |
| 6) | ಶ್ರೀ ವಿನಾಯಕ ವಿದ್ಯಾಸಂಸ್ಥೆ ಅಂಜನಾನಗರ, ಮಾಗಡಿರಸ್ತೆ, ಬೆಂಗಳೂರು | ಅಂಜನಾನಗರ, ಬೆಂಗಳೂರು |
| 7) | ಮಿತ್ರ ಶಿಕ್ಷಣ ದತ್ತಿ ವಿದ್ಯಾಸಂಸ್ಥೆ ಆವಲಹಳ್ಳಿ, ಬೆಂಗಳೂರು | ಆವಲಹಳ್ಳಿ ಬೆಂಗಳೂರು ದಕ್ಷಿಣ |
| 8) | ಹಿಂದಿ ಶಿಕ್ಷಣ ಸಂಘ, ವಿಕ್ಟೋರಿಯಾ ರಸ್ತೆ, ಬೆಂಗಳೂರು | ರಂಗಸ್ವಾಮಿ ರಸ್ತೆ, ಬೆಂಗಳೂರು |
| 9) | ಉದಯ ಎಜುಕೇಷನ್ ಸೊಸೈಟಿ, ಕಿಲಾರಿ ರಸ್ತೆ, ಬೆಂಗಳೂರು | ಕಿಲಾರಿ ರಸ್ತೆ, ಬೆಂಗಳೂರು |
| 10) | ಬೆರಾಕಾ ಇಂಗ್ಲೀಷ್ ಮಹಾಪುರ, ತುಮಕೂರು ರಸ್ತೆ, ಬೆಂಗಳೂರು | ಮಹಾಪುರ, ತುಮಕೂರು ರಸ್ತೆ ಬೆಂಗಳೂರು |
| 11) | ಸತ್ಯ ಎಜುಕೇಷನ ಸೊಸೈಟಿ, ಶ್ರೀರಾಂಪುರ, ಬೆಂಗಳೂರು | ಶ್ರೀರಾಂಪುರ, ಬೆಂಗಳೂರು |
| 12) | ಇಂಡಿಯನ್ ಪ್ರಿಪೆರೆಟರಿ ಎಜುಕೇಷನ ಬೋರ್ಡ್, ಬೆಂಗಳೂರು | ಬೆಂಗಳೂರು-3 |
| 13) | ಬಾಪು ಬಾಲಕಾ ಪ್ರೌಢಶಾಲೆ, ಯಶವಂತಪುರ ಬೆಂಗಳೂರು | ಯಶವಂತಪುರ ಬೆಂಗಳೂರು |
| 14) | ಎಂ ಇ ಎಸ್ ಎಜುಕೇಷನ್ ಸೊಸೈಟಿ ಮಲ್ಲೇಶ್ವರಂ ಬೆಂಗಳೂರು | ಮಲ್ಲೇಶ್ವರಂ, ಬೆಂಗಳೂರು |
| 15) | ಸೆವೆಂತ್ ಡೇ ಅಡ್ವೆಂಟಿಸ್ಟ್ ಪ್ರೌಢಶಾಲೆ, ಕಮ್ಮಗೊಂಡನಹಳ್ಳಿ, ಬೆಂಗಳೂರು | ಕಮ್ಮಗೊಂಡನಹಳ್ಳಿ, ಜಾಲಹಳ್ಳಿ ಪಶ್ಚಿಮ ಬೆಂಗಳೂರು |
| 16) | ಕಮಲಾಬಾಯಿ ಪ್ರೌಢಶಾಲೆ, ಕ್ವೀನ್ಸ್‌ರಸ್ತೆ, ಬೆಂಗಳೂರು | ಕ್ವೀನ್ಸ್ ರಸ್ತೆ ಬೆಂಗಳೂರು |
| 17) | ಸಿ ವಿ ಜಿ ಪ್ರೌಢಶಾಲೆ, ದಾಬಸಪೇಟೆ ನೆಲಮಂಗಲ ತಾಲ್ಲೂಕು ಬೆಂಗಳೂರು ಜಿಲ್ಲೆ | ದಾಬಸಪೇಟೆ, ನೆಲಮಂಗಲ ತಾಲ್ಲೂಕು |
| 18) | ಚಂದ್ರೋದಯ ವಿದ್ಯಾಲಯ ಮಹಿಳಾ ಮಂಡಳಿ, ಯಶವಂತಪುರ, ಬೆಂಗಳೂರು | ಯಶವಂತಪುರ ಬೆಂಗಳೂರು |

ಧಾರವಾಡ ಜಿಲ್ಲೆ

| | |
|---|---|
| 1) ಶ್ರೀ ಚನಬಸವೇಶ್ವರ ಗ್ರಾಮೀಣ ವಿದ್ಯಾ ಸಂಸ್ಥೆ, ಶಿಗ್ಗಾಂವ | ಶಿಗ್ಗಾಂ |
| 2) ಶ್ರೀ ಲಕ್ಷ್ಮೇಶ್ವರ ವಿಮಲಾ ವಿದ್ಯಾಲಯ ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು | ಲಕ್ಷ್ಮೇಶ್ವರ |
| 3) ಶ್ರೀ ಸೋಮೇಶ್ವರ ಶಿಕ್ಷಣ ಸಂಸ್ಥೆ, ಕೋಟುಮಚಗಿ, ಗದಗ ತಾಲ್ಲೂಕು | ಕೋಟುಮಚಗಿ |
| 4) ಶ್ರೀ ಶರಣಬಸವೇಶ್ವರ ಹೈಸ್ಕೂಲ ಗದಗ ಬೆಟಗೇರಿ | ಗದಗ, ಬೆಟಗೇರಿ |
| 5) ಕರ್ನಾಟಕ ನ್ಯಾಷನಲ ಇಂಗ್ಲೀಷ ಶಾಲೆ, ಹುಬ್ಬಳ್ಳಿ | ಹುಬ್ಬಳ್ಳಿ |

ಉತ್ತರ ಕನ್ನಡ ಜಿಲ್ಲೆ

| | |
|---|---|
| 1) ಬೆತ್ತಣಿ ಎಜುಕೇಷನ ಸೊಸೈಟಿ, ಕಂಕನಾಡಿ, ಮಂಗಳೂರು | ಚರ್ಚರಸ್ತೆ, ಶಿರಸಿ |

ಬೆಳಗಾವಿ ಜಿಲ್ಲೆ

| | |
|---|---|
| 1) ಗೋಮಟೇಶ ವಿದ್ಯಾಪೀಠ, ಗೋಮಟೇಶನಗರ ಬೆಳಗಾವಿ | ಹಿಂದವಾಡಿನಗರ, ಬೆಳಗಾವಿ |
| 2) ದಿ ಹುಲಕುಂದ ರಾಮೇಶ್ವರ ಶೈಕ್ಷಣಿಕ ಸಂಸ್ಥೆ, ಹುಲಕುಂದ, ರಾಮದುರ್ಗ ತಾ: | ಹುಲಕುಂದ |

ಬಿಜಾಪುರ ಜಿಲ್ಲೆ

| | |
|---|---|
| 1) ಗ್ರಾಮೀಣ ವಿದ್ಯಾವರ್ಧಕ ಸಂಘ, ಬಜ್ಜರಗಿ, | ಬಜ್ಜರಗಿ |
| 2) ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಮಲಗಾನ, ಸಿಂಧಗಿ ತಾ: | ಮಲಗಾನ |
| 3) ದೇಶಭಕ್ತ, ಪದ್ಮಶ್ರೀ ಡಾ: ರತ್ನಪ್ಪಣ್ಣ ಕುಂಬಾರ ಶಿಕ್ಷಣ ಸಂಸ್ಥೆ, ನಿಡಗುಂದಿ ಬಾಗೇವಾಡಿ ತಾಲ್ಲೂಕು | ನಿಡಗುಂದಿ |
| 4) ಟ್ರೈಬಲ ಸೇವಾ ಸಂಘ, ಮುದ್ದೇಬಿಹಾಳ | ಇಂದಿರಾನಗರ, ಹೆಚ್.ಎಸ್. ತಾಳಿಕೋಟಿ, |
| 5) ಶ್ರೀ ವೆಂಕಟೇಶ್ವರ ವಿದ್ಯಾವರ್ಧಕ ಸಂಘ ಹಿಟ್ಟನಹಳ್ಳಿ, ತನಾಲೆ, ಸಿಂಧಗಿ ತಾ: | ಹೆಚ್.ಎಸ್.ಮಣ್ಣೂರು, ಸಿಂಧಗಿ ತಾಲ್ಲೂಕು |
| 6) ದಲಿತೋದ್ಧಾರಕ ಸಂಸ್ಥೆ, ಇಂಡಿ ರೈಲ್ವೆ ನಿಲ್ದಾಣ | ಇಂಡಿ ರೈಲ್ವೆ ನಿಲ್ದಾಣ |

...4

| | |
|---|---|
| 7) ಶ್ರೀ ರೇಣುಕಾಚಾರ್ಯ ಪ್ರೌಢಶಾಲೆ ಇಂಗಳೇಶ್ವರ, ಬಸವನಬಾಗೇವಾಡಿ ತಾ: | ಇಂಗಳೇಶ್ವರ |
| 8) ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಘ, ಕನಗಾಲ ಬಸವನಬಾಗೇವಾಡಿ ತಾ: | ಕನಗಾಲ |
| 9) ಬಂಜಾರಾ ವಿದ್ಯಾವರ್ಧಕ ಸಂಘ, ಬಿಜಾಪುರ | ತಿಡಗುಂದಿ, ಬಿಜಾಪುರ ತಾ: |

ಮೈಸೂರು ಮತ್ತು ಕೊಡಗು ಜಿಲ್ಲೆಗಳು

| | |
|---|---|
| 1) ದಿ ಮೈಸೂರು ಡೈಯೋಸಿಸನ್ ಎಜುಕೇಷನ್ ಸೊಸೈಟಿ, ಮೈಸೂರು | ಸೆಂಟ್ ಆನ್ಸ್ ಪ್ರೌಢಶಾಲೆ, ವಿರಾಜಪೇಟೆ ಕೊಡಗು ಜಿಲ್ಲೆ |
| 2) ಬಿ.ಹೆಚ್.ಎಸ್.ಹೈಯರ್ ಎಜುಕೇಷನ್ ಸೊಸೈಟಿ, ಜಯನಗರ, ಬೆಂಗಳೂರು | ಪದ್ಮರಾಜನ್ ಮೆಮೋರಿಯಲ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಟಿ.ನರಸೀಪುರ |

ಮಂಡ್ಯ ಜಿಲ್ಲೆ

| | |
|---|---|
| 1) ಎ.ವಿ.ಎಂ.ಶಿಕ್ಷಣ ಸಂಘ, ಕಿಲಾರೆ, ಮಂಡ್ಯ ತಾಲ್ಲೂಕು | ಸರ್ ಎಂ.ವಿಶ್ವೇಶ್ವರಯ್ಯ ಪ್ರೌಢಶಾಲೆ, ಕಿಲಾರೆ, ಮಂಡ್ಯ ತಾಲ್ಲೂಕು |
| 2) ರೈತರ ಶಿಕ್ಷಣ ಪ್ರೌಢಶಾಲೆ, ಹನಕೆರೆ, ಮಂಡ್ಯ ತಾಲ್ಲೂಕು | ಹನಕೆರೆ, ಮಂಡ್ಯ ತಾಲ್ಲೂಕು |

ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳು

| | |
|---|---|
| 1) ಎಸ್.ಎಸ್.ಡಿ.ಜೆ.ಪ್ರಸಾರಕ ಸಂಘ, ಶ್ರವಣಬೆಳಗೊಳ, | ಶ್ರವಣಬೆಳಗೊಳ |
| 2) ಶ್ರೀ ಚಾಡೇಶ್ವರಿ ವಿದ್ಯಾಸಂಸ್ಥೆ ಗಿರಿಕ್ಷೇತ್ರ, ಮುಸುಕನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು | ಗಿರಿಕ್ಷೇತ್ರ, ಮುಸುಕನಹಳ್ಳಿ |

ಗುಲ್ಬರ್ಗಾ ಜಿಲ್ಲೆ

| | |
|---|---|
| 1) ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಸಂಸ್ಥೆ ರಾವೂರು, ಚಿತ್ತಾಪುರ ತಾಲ್ಲೂಕು | ರಾವೂರು |
| 2) ಶ್ರೀ ಮಹಂತ ಜ್ಯೋತಿ ವಿದ್ಯಾಪೀಠ ಮಹಂತಪುರ, ಅಫಜಲಪುರ ತಾಲ್ಲೂಕು | ಮಹಂತಪುರ |
| 3) ಇಸ್ಲಾಮಿಯಾ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ | ಗುಲ್ಬರ್ಗಾ |
| 4) ಸುಭಾಷ ಮೆಮೋರಿಯಲ್ ಶಿಕ್ಷಣ ಸಂಸ್ಥೆ ಗುಲ್ಬರ್ಗಾ | ಗುಲ್ಬರ್ಗಾ |

([illegible].ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 54 ಎಸ್‌ಹೆಚ್‌ಹೆಚ್ 94

ಕರ್ನಾಟಕ ಸರ್ಕಾರದ ಸಚಿವಾಲಯ–2,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ 18–8–1994.

## ತಿದ್ದುಪಡಿ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಇಡಿ 83 ಎಸ್.ಹೆಚ್.ಹೆಚ್.94 ದಿನಾಂಕ 1–6–94ರ ಅನುಬಂಧದಲ್ಲಿನ ಬೆಂಗಳೂರು ಜಿಲ್ಲೆಯ ಕ್ರಮ ಸಂಖ್ಯೆ: 5 ರಲ್ಲಿನ ಬಿ.ಇ.ಟಿ.ಎಜುಕೇಷನ್ ಸೊಸೈಟಿ, ಬಿಸ್ಮಿಲ್ಲಾನಗರ, ಬೆಂಗಳೂರು ಎಂಬುದರ ಬದಲಾಗಿ ಬಿಸ್ಮಿಲ್ಲಾ ಎಜುಕೇಷನಲ್ ಟ್ರಸ್ಟ್, ಬಿಸ್ಮಿಲ್ಲಾನಗರ, ಬೆಂಗಳೂರು ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

(ಆರ್. ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.
27/8/94

ಪ್ರತಿಯನ್ನು:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
3. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
4. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ ಬೆಂಗಳೂರು.
5. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ಕಾರ್ಯದರ್ಶಿ, ಬಿಸ್ಮಿಲ್ಲಾ ಎಜುಕೇಷನಲ್ ಟ್ರಸ್ಟ್, ಬಿಸ್ಮಿಲ್ಲಾನಗರ, ಬೆಂಗಳೂರು
7. ರಕ್ಷ ಕಡತ.

ಪದವಿ ಪೂರ್ವ ಶಿಕ್ಷಣ ಇಲಾಖೆ

# Department of Pre University Education

೧೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – ೫೬೦ ೦೦೩

18th Cross, Malleswaram, Bangalore - 560 003

## ಶೈಕ್ಷಣಿಕ ಮಾನ್ಯತೆ
## Academic Recognition

(Under Section 38 of Karnataka Education Act - 1983)

BET PU COLLEGE ,BISMILLANAGAR BGT RD

BANGALORE 560029 (AS221)

(UNAIDED PU COLLEGE )

ಗೆ 2006-07 TO 2010-11 ನೇ ಸಾಲಿಗೆ ಶೈಕ್ಷಣಿಕ ಮಾನ್ಯತೆಯನ್ನು ಈ ಕೆಳಗಿನ ವಿವರಗಳೊಂದಿಗೆ ನವೀಕರಿಸಲಾಗಿದೆ.

Academic recognition of the above described college for the year ....2006-07...TO..2010-11... has been renewed with the following details

ಭಾಷಾ ವಿಷಯಗಳು :
Languages : 02 03 08

ಸಂಯೋಜನೆಗಳು :
Combination/s : 33 34 35 36

21 22 27 30

21 22 28 29

| ವಿಭಾಗಗಳು : Section/s : | ಅನುದಾನಿತ Aided | ಅನುದಾನ ರಹಿತ Unaided | ಒಟ್ಟು ವಿಭಾಗಗಳು Total Sections |
|---|---|---|---|
| I PUC : | – | 1 ( ONE ) | 1 ( ONE ) |
| II PUC : | – | 1 ( ONE ) | 1 ( ONE ) |

RENEWED FOR FIVE YEARS FROM 2006-2007 TO 2010-2011
ENCL:MEMO NO:PAPUSHI/MANYATE/MANYATE-NAVEEKARANA/2006-07 DT :05-03-2007

209

COMMISSIONER
Pre-University Education
Bangalore-560 012.

PRINCIPAL
PRINCIPAL
BET Composite PU College

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
Director
Dept. of Pre University Education

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಮಾನ್ಯತೆ/ಎಎಸ್ ೨೨೧/ಹೆವಿಅ/೦೯-೧೦

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರ
ಬೆಂಗಳೂರು-12
ದಿನಾಂಕ: 02-01-2009

ಜ್ಞಾಪನ

ವಿಷಯ: ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಈ ಕಾಲೇಜಿಗೆ 2009-10ನೇ ಶೈಕ್ಷಣಿಕ ಸಾಲಿನಿಂದ ಹೆಚ್ಚುವರಿ ವಿಷಯವನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ೧. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಇವರ ಪತ್ರ ದಿನಾಂಕ ೨೫-೦೫-೨೦೦೯
೨. ಪ್ರಾಚಾರ್ಯರ ಪತ್ರ ದಿನಾಂಕ ೧೮-೧೧-೨೦೦೯

* * * *

**ಪ್ರಸ್ತಾವನೆ:-**

ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಈ ಕಾಲೇಜಿನಲ್ಲಿ ಭಾಗ-೧ರಲ್ಲಿ ಕನ್ನಡ ವಿಷಯವನ್ನು ಬೋಧಿಸಲು 2009-10ನೇ ಸಾಲಿನಿಂದ ಅನುಮತಿಯನ್ನು ಸಂಸ್ಥೆಯವರು ಕೋರಿರುತ್ತಾರೆ. ಉಪ ನಿರ್ದೇಶಕರು ಉಲ್ಲೇಖಿತ ವರದಿಯಲ್ಲಿ ಸ್ಪಷ್ಟ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಹೆಚ್ಚುವರಿ ವಿಷಯವನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಈ ಕಾಲೇಜಿನಲ್ಲಿ ಭಾಗ-೧ರಲ್ಲಿ **ಕನ್ನಡ ಭಾಷಾ** ವಿಷಯವನ್ನು ***2009-10ನೇ*** **ಸಾಲಿನಿಂದ ಶಾಶ್ವತ ಅನುದಾನ ರಹಿತವಾಗಿ** ಬೋಧಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಅನುಮತಿ ನೀಡಲಾಗಿದೆ.

ಷರತ್ತುಗಳು:-

೦೧. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯು ಶಾಶ್ವತ ಅನುದಾನ ರಹಿತವಾಗಿದ್ದು, ಆಡಳಿತ ಮಂಡಳಿಯು ಮುಂದೆ ಯಾವುದೇ ಸಂದರ್ಭದಲ್ಲಿ ಅನುದಾನ ಕೇಳುವುದಿಲ್ಲವೆಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು.

೦೨. ಮಂಜೂರಾದ ಹೆಚ್ಚುವರಿ ವಿಷಯ/ಸಂಯೋಜನೆಗೆ ನೇಮಕ ಮಾಡುವ ಉಪನ್ಯಾಸಕರಿಗೆ/ಸಿಬ್ಬಂದಿಗೆ ಸರ್ಕಾರದಿಂದ ಯಾವುದೇ ಅನುದಾನ ಲಭ್ಯವಾಗುವುದಿಲ್ಲ.

೦೩. ಅರ್ಹ ವಿದ್ಯಾರ್ಹತೆಯುಳ್ಳ ಉಪನ್ಯಾಸಕರುಗಳನ್ನು ಶಾಶ್ವತ ಅನುದಾನ ರಹಿತವಾಗಿ ಆಡಳಿತ ಮಂಡಳಿಯ ಜವಾಬ್ದಾರಿಯ ಮೇಲೆ ಮಾತ್ರ ನೇಮಿಸಿಕೊಳ್ಳಬೇಕು.

೦೪. ಸರ್ಕಾರವು ನಿಗಧಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕ ಮತ್ತು ವಂತಿಕೆಗಳನ್ನು ವಸೂಲಿ ಮಾಡತಕ್ಕದ್ದಲ್ಲ.

- 2 -

PRINCIPAL
BET Composite PU College
Bismillah Nagar
BANGALORE - 560 029.

೦೫. ಹೊಸದಾಗಿ ತೆರೆಯಲು ಅನುಮತಿ ನೀಡುವ ಯಾವುದೇ ವಿಷಯ/ವಿಭಾಗ/ಸಂಯೋಜನೆಗಳು ಶಾಶ್ವತವಾಗಿ ಅನುದಾನ ರಹಿತವಾಗಿರುತ್ತವೆ. *(Permanently Unaided)*

೦೬. ಸಂಬಂಧಪಟ್ಟ ಆಡಳಿತ ಮಂಡಳಿಗಳು ಶಿಕ್ಷಣ ಅಧಿನಿಯಮ ೧೯೮೩ ಹಾಗೂ ನಿಯಮಗಳ ಉಪಬಂಧಗಳ ಎಲ್ಲಾ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

೦೭. ಈ ಹೆಚ್ಚುವರಿ ವಿಷಯ/ಸಂಯೋಜನೆಗೆ ಅಗತ್ಯ ಸೌಲಭ್ಯಗಳನ್ನು ಹಾಗೂ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೊಂದಿರತಕ್ಕದ್ದು.

೦೮. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಧಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

೦೯. ಗಣಕವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ ಕನಿಷ್ಠ ೧೦ ವಿದ್ಯಾರ್ಥಿಗಳಿಗೆ ಒಂದರಂತೆ *(10:1)* ಗಣಕಯಂತ್ರಗಳಿರಬೇಕು. ೪೦ ವಿದ್ಯಾರ್ಥಿಗಳಿಗೆ ೪ ಗಣಕಯಂತ್ರ, ಕೊಠಡಿಗಳ ಹಾಗೂ ಇತರೆ ಸೌಲಭ್ಯಗಳಿರಬೇಕು.

೧೦. ಕಾಲೇಜಿನಲ್ಲಿ ಈಗಾಗಲೇ ಅಳವಡಿಸಿಕೊಂಡಿರುವ ವಿಭಾಗಗಳಲ್ಲಿ ಕನಿಷ್ಠ ೪೦ ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದಿರಿಸಿಕೊಂಡಿರಬೇಕು.

೧೧. ಪ್ರತಿ ವಿಭಾಗಕ್ಕೆ ೮೦ ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಬಾರದು ಮತ್ತು ಇತ್ತೀಚಿನ ದಾಖಲಾತಿ ನಿಯಮವನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

೧೨. ಹೆಚ್ಚುವರಿ ವಿಷಯ/ಸಂಯೋಜನೆ ತೆರೆಯಲು ಉದ್ದೇಶಿಸಿರುವ ಕಾಲೇಜಿನ ೮ ಕಿ.ಮೀ. ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ಸದರಿ ಸಂಯೋಜನೆ ಇದ್ದಲ್ಲಿ ವಿಷಯ /ವಿಭಾಗಗಳಲ್ಲಿ ವಿದ್ಯಾರ್ಥಿ ಸಂಖ್ಯೆ ಗರಿಷ್ಠ ಹಂತ ತಲುಪಿರಬೇಕು.

೧೩. ಹೆಚ್ಚುವರಿ ವಿಭಾಗ ತೆರೆಯಬೇಕಾದರೆ ವಿಭಾಗಕ್ಕೊಂದರಂತೆ ಕನಿಷ್ಠ ೨೨ x ೩೦ ಅಳತೆಯ ಹೆಚ್ಚುವರಿ ಕೊಠಡಿ ಇರಬೇಕು.

೧೪. ಹೊಸದಾಗಿ ತೆರೆಯಲು ಅನುಮತಿ ನೀಡಿದ ವಿಷಯ/ಸಂಯೋಜನೆಗೆ ಅನುಮತಿ ನೀಡಿದ ದಿನಾಂಕದಿಂದ ಮೂರು ಶೈಕ್ಷಣಿಕ ವರ್ಷಗಳಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲವು ೪೦ನ್ನು ತಲುಪಬೇಕು, ಆ ರೀತಿ ಕನಿಷ್ಠ ಸಂಖ್ಯಾಬಲ ಹೊಂದದಿದ್ದಲ್ಲಿ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು.

ಟಿಪ್ಪಣಿ ಮಾನ್ಯ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರ ಪರವಾಗಿ,
ಪದವಿ ಪೂರ್ವ ಶಿಕ್ಷಣ ಇಲಾಖೆ.
2.1.10.

ಪ್ರತಿಗಳು :-

೧. ಉಪನಿರ್ದೇಶಕರು, ಪಪೂಶಿಇ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು, ಮುಂದಿನ ಕ್ರಮಕ್ಕಾಗಿ.
೨. ಪ್ರಾಚಾರ್ಯರು, ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
೩. ಗಣಕಶಾಖೆ, ಕೇಂದ್ರ ಕಚೇರಿ, ಪಪೂಶಿಇ, ಬೆಂಗಳೂರು - ಮುಂದಿನ ಕ್ರಮಕ್ಕಾಗಿ.
೪. ಕಚೇರಿ/ಹೆಚ್ಚುವರಿ ಪ್ರತಿ.

PRINCIPAL
BET Composite PU College
Bismillah Nagar
BANGALORE - 560 029.

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಮಾನ್ಯತೆ/ಎಸ್ ೨೨೧/ಹೆವಿಅ/೦೯-೧೦

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರ
ಬೆಂಗಳೂರು-12
ದಿನಾಂಕ: 01-09-2009

## ಜ್ಞಾ ಪ ನ

ವಿಷಯ: ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಈ ಕಾಲೇಜಿಗೆ 2009-10ನೇ ಶೈಕ್ಷಣಿಕ ಸಾಲಿನಿಂದ ಹೆಚ್ಚುವರಿ ಸಂಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ೧. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಇವರ ಪತ್ರ ದಿನಾಂಕ ೨೫-೦೫-೨೦೦೯
೨. ಪ್ರಾಚಾರ್ಯರ ಪತ್ರ ದಿನಾಂಕ ೦೪-೦೬-೨೦೦೯

* * * *

**ಪ್ರಸ್ತಾವನೆ:-**

ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಈ ಕಾಲೇಜಿನಲ್ಲಿ ಗಣಕ ವಿಜ್ಞಾನ ವಿಷಯವನ್ನೊಳಗೊಂಡ ಇಬಿಎಸಿಎಸ್ ಮತ್ತು ಪಿಸಿಎಂಸಿಎಸ್ ಸಂಯೋಜನೆಗಳನ್ನು ಬೋಧಿಸಲು 2009-10ನೇ ಸಾಲಿನಿಂದ ಅನುಮತಿಯನ್ನು ಸಂಸ್ಥೆಯವರು ಕೋರಿರುತ್ತಾರೆ. ಉಪ ನಿರ್ದೇಶಕರು ಉಲ್ಲೇಖಿತ ವರದಿಯಲ್ಲಿ ಸ್ಪಷ್ಟ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಹೆಚ್ಚುವರಿ ಸಂಯೋಜನೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಈ ಕಾಲೇಜಿನಲ್ಲಿ ಗಣಕ ವಿಜ್ಞಾನ ವಿಷಯವನ್ನೊಳಗೊಂಡ ಇಬಿಎಸಿಎಸ್ (ಅರ್ಥಶಾಸ್ತ್ರ ವ್ಯವಹಾರಿಕ ಅಧ್ಯಯನ, ಲೆಕ್ಕಶಾಸ್ತ್ರ ಗಣಕ ವಿಜ್ಞಾನ) ಸಂಯೋಜನೆಯ ಒಂದು ವಿಭಾಗಕ್ಕೆ ಮಾತ್ರ ***2009-10ನೇ*** **ಸಾಲಿನಿಂದ ಶಾಶ್ವತ** ಅನುದಾನ ರಹಿತವಾಗಿ ಬೋಧಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆ.

ಷರತ್ತುಗಳು:-

೦೧. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯು ಶಾಶ್ವತ ಅನುದಾನ ರಹಿತವಾಗಿದ್ದು ಆಡಳಿತ ಮಂಡಳಿಯು ಮುಂದೆ ಯಾವುದೇ ಸಂದರ್ಭದಲ್ಲಿ ಅನುದಾನ ಕೇಳುವುದಿಲ್ಲವೆಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು.

೦೨. ಮಂಜೂರಾದ ಹೆಚ್ಚುವರಿ ವಿಷಯ/ಸಂಯೋಜನೆಗೆ ನೇಮಕ ಮಾಡುವ ಉಪನ್ಯಾಸಕರಿಗೆ/ಸಿಬ್ಬಂದಿಗೆ ಸರ್ಕಾರದಿಂದ ಯಾವುದೇ ಅನುದಾನ ಲಭ್ಯವಾಗುವುದಿಲ್ಲ.

೦೩. ಅರ್ಹ ವಿದ್ಯಾರ್ಹತೆಯುಳ್ಳ ಉಪನ್ಯಾಸಕರುಗಳನ್ನು ಶಾಶ್ವತ ಅನುದಾನ ರಹಿತವಾಗಿ ಆಡಳಿತ ಮಂಡಳಿಯ ಜವಾಬ್ದಾರಿಯ ಮೇಲೆ ಮಾತ್ರ ನೇಮಿಸಿಕೊಳ್ಳಬೇಕು.

೦೪. ಸರ್ಕಾರವು ನಿಗಧಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕ ಮತ್ತು ವಂತಿಗೆಗಳನ್ನು ವಸೂಲಿ ಮಾಡತಕ್ಕದ್ದಲ್ಲ.

- 2 -

PRINCIPAL
BET Composite PU College
Bismillah Nagar
BANGALORE - 560 029.

೦೫. ಹೊಸದಾಗಿ ತೆರೆಯಲು ಅನುಮತಿ ನೀಡುವ ಯಾವುದೇ ವಿಷಯ/ವಿಭಾಗ/ಸಂಯೋಜನೆಗಳು ಶಾಶ್ವತವಾಗಿ ಅನುದಾನ ರಹಿತವಾಗಿರುತ್ತವೆ. *(Permanently Unaided)*

೦೬.ಸಂಬಂಧಪಟ್ಟ, ಆಡಳಿತ ಮಂಡಳಿಗಳು ಶಿಕ್ಷಣ ಅಧಿನಿಯಮ ೧೯೮೩ ಹಾಗೂ ನಿಯಮಗಳ ಉಪಬಂಧಗಳ ಎಲ್ಲಾ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು

೦೭. ಈ ಹೆಚ್ಚುವರಿ ವಿಷಯ/ಸಂಯೋಜನೆಗೆ ಅಗತ್ಯ ಸೌಲಭ್ಯಗಳನ್ನು ಹಾಗೂ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೊಂದಿರತಕ್ಕದ್ದು

೦೮. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಧಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

೦೯. ಗಣಕವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ ಕನಿಷ್ಠ ೧೦ ವಿದ್ಯಾರ್ಥಿಗಳಿಗೆ ಒಂದರಂತೆ *(10:1)* ಗಣಕಯಂತ್ರಗಳಿರಬೇಕು. ೪೦ ವಿದ್ಯಾರ್ಥಿಗಳಿಗೆ ೪ ಗಣಕಯಂತ್ರ, ಕೊಠಡಿಗಳ ಹಾಗೂ ಇತರ ಸೌಲಭ್ಯಗಳಿರಬೇಕು.

೧೦. ಕಾಲೇಜಿನಲ್ಲಿ ಈಗಾಗಲೇ ಅಳವಡಿಸಿಕೊಂಡಿರುವ ವಿಭಾಗಗಳಲ್ಲಿ ಕನಿಷ್ಠ ೪೦ ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದಿರಿಸಿಕೊಂಡಿರಬೇಕು.

೧೧. ಪ್ರತಿ ವಿಭಾಗಕ್ಕೆ ೮೦ ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಬಾರದು ಮತ್ತು ಇತ್ತೀಚಿನ ದಾಖಲಾತಿ ನಿಯಮವನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

೧೨. ಹೆಚ್ಚುವರಿ ವಿಷಯ/ಸಂಯೋಜನೆ ತೆರೆಯಲು ಉದ್ದೇಶಿಸಿರುವ ಕಾಲೇಜಿನ ೮ ಕಿ.ಮೀ. ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ಸದರಿ ಸಂಯೋಜನೆ ಇದ್ದಲ್ಲಿ ವಿಷಯ /ವಿಭಾಗಗಳಲ್ಲಿ ವಿದ್ಯಾರ್ಥಿ ಸಂಖ್ಯೆ ಗರಿಷ್ಠ ಹಂತ ತಲುಪಿರಬೇಕು.

೧೩. ಹೆಚ್ಚುವರಿ ವಿಭಾಗ ತೆರೆಯಬೇಕಾದರೆ ವಿಭಾಗಕ್ಕೊಂದರಂತೆ ಕನಿಷ್ಠ ೨೨ x ೩೦ ಅಳತೆಯ ಹೆಚ್ಚುವರಿ ಕೊಠಡಿ ಇರಬೇಕು.

೧೪. ಹೊಸದಾಗಿ ತೆರೆಯಲು ಅನುಮತಿ ನೀಡಿದ ವಿಷಯ/ಸಂಯೋಜನೆಗೆ ಅನುಮತಿ ನೀಡಿದ ದಿನಾಂಕದಿಂದ ಮೂರು ಶೈಕ್ಷಣಿಕ ವರ್ಷಗಳಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಬಲವು ೪೦ನ್ನು ತಲುಪಬೇಕು, ಆ ರೀತಿ ಕನಿಷ್ಠ ಸಂಖ್ಯಾಬಲ ಹೊಂದದಿದ್ದಲ್ಲಿ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು.

ಟಿಪ್ಪಣಿ ಮಾನ್ಯ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರ ಪರವಾಗಿ, 1-9-09
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು :-

೧. ಉಪನಿರ್ದೇಶಕರು, ಪಪೂಶಿಇ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು, ಮುಂದಿನ ಕ್ರಮಕ್ಕಾಗಿ.
೨. ಪ್ರಾಚಾರ್ಯರು, ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು,
೩. ಗಣಕಶಾಖೆ, ಕೇಂದ್ರ ಕಚೇರಿ, ಪಪೂಶಿಇ, ಬೆಂಗಳೂರು - ಮುಂದಿನ ಕ್ರಮಕ್ಕಾಗಿ.
೪. ಕಚೇರಿ/ಹೆಚ್ಚುವರಿ ಪ್ರತಿ.

PRINCIPAL
BET Composite Pu College
Bismillah Nagar
BANGALORE - 560 029.

Encl - 5

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರ ಅಲ್ಪಸಂಖ್ಯಾತರ ಭಾಷಾ ಶಾಲೆಗಳ ನಿರ್ದೇಶಕಾಲಯ, ಆಯುಕ್ತರ ಕಛೇರಿ, ಬೆಂಗಳೂರು-560001.

ಸಂಖ್ಯೆ:ಎಂಸಿ4:ಘೋಷಣೆ:28:95-96

ದಿನಾಂಕ:26-3-96.

ಸಹನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು ವಿಭಾಗ,
ಬೆಂಗಳೂರು.

ಮಾನ್ಯರೆ,

ವಿಷಯ:- ಬಿ.ಇ.ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು ಬಿಸ್ಮಿಲ್ಲಾನಗರ, ಬೆಂಗಳೂರು ಇದನ್ನು ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂದು ಘೋಷಿಸುವ ಬಗ್ಗೆ.

ಉಲ್ಲೇಖ:- 1) ನಿಮ್ಮ ಪತ್ರ ಸಂಖ್ಯೆ: ಅನು1:(ಅ) ಘೋಷಣೆ:14:95-96, ದಿನಾಂಕ:10-1-96.
2) ಸರಕಾರದ ಆದೇಶ ಸಂ. ಇಡಿ:10: ಡಿಎಲ್ಆರ್:96 ದಿನಾಂಕ:8-2-96.

-ooo-

ಮೇಲಿನ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರಿನ ಬಿಸ್ಮಿಲ್ಲಾ ಎಜುಕೇಷನಲ್ ಟ್ರಸ್ಟನವರು ಬೆಂಗಳೂರಿನ ಬಿಸ್ಮಿಲ್ಲಾನಗರದಲ್ಲಿ ನಡೆಸುತ್ತಿರುವ ಬಿ.ಇ.ಟಿ ಸಂಯುಕ್ತ ಪದವಿ ಪೂರ್ವ ಕಾಲೇಜನ್ನು ಮತೀಯ ಅಲ್ಪಸಂಖ್ಯಾತರ ಕಾಲೇಜು ಎಂದು ಘೋಷಿಸಿದೆ.

(ಆಯುಕ್ತರ ಆದೇಶದ ಮೇರೆಗೆ)

ತಮ್ಮ ನಂಬುಗೆಯ,

ನಿರ್ದೇಶಕರು.

"ನ ಕ ಲು"

ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರ ಕಛೇರಿ ಬೆಂಗಳೂರು ವಿಭಾಗ, ಬೆಂಗಳೂರು

ಸಂಖ್ಯೆ:ಅನು1(ಅ) ಇತರ:ಅಲ್ಪ ಸಂ.ಘೋ:14:95-96 ದಿ:9-4-1996

ಬಿ. ಇ. ಟಿ. ಸಂಯುಕ್ತ ಪದವಿ ಪೂರ್ವ ಕಾಲೇಜು ಬಿಸ್ಮಿಲ್ಲಾನಗರ ಬೆಂಗಳೂರು ಇದನ್ನು ಮತೀಯ ಅಲ್ಪ ಸಂಖ್ಯಾತರ ಕಾಲೇಜು ಎಂದು ಘೋಷಿಸಿರುವ ನಿರ್ದೇಶಕರು ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು ಇವರು 26-3-96 ರ ಪತ್ರ ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.

ಕರಡುಪ್ರತಿ ಸಹನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ.

ಸಹನಿರ್ದೇಶಕರ ಪರವಾಗಿ.

1) ಗೌರವ ಕಾರ್ಯದರ್ಶಿ, ಬಿಸ್ಮಿಲ್ಲಾ ಎಜುಕೇಶನ ಟ್ರಸ್ಟ ಬಿಸ್ಮಿಲ್ಲಾನಗರ, ಬೆಂಗಳೂರು-29.
2) ಪ್ರಾಂಶುಪಾಲರು, ಬಿ ಇ ಟಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ ಬೆಂಗಳೂರು-29.
3) ಕಛೇರಿ ಪ

ಟಿಸಿ.

PRINCIPAL
BET Composite PU College
Bismillah Nagar
BANGALORE - 560 029.

Hon. Secretary
Bismillah Educational Trust
Bismillahnagar,
Bangalore-560 029.

No.ADM.MSC (2) CR 26/88-89

Office of the Tahsilda
Bangalore South Taluk
Bangalore.Dtd : 4-1-199

Sub:- Bismillah education Trust, Bannarghatta, Bangalore- 29 to Minority Certificate

-----

CERTIFICATE

This is to certify that Bismilla Education Trust, Bismillanagar, Bannaraghatta Road, Bangalore-29 is treated as Minority institution.

This certificate is ~~exceed~~ issued to produce to the education department.

Tahsildar
Bangalore South Taluk
4-1-90

Office of the Tahsildar
No 26/88
Date 4-1-90
BANGALORE
Bangalore South Taluk

PRINCIPAL
BET Composite PU College
Bismillah Nagar
BANGALORE - 560 029.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 1994—95ನೇ ಸಾಲಿನಲ್ಲಿ ರಾಜ್ಯದಲ್ಲಿ ನೂತನ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ: ಪರಿಶೀಲನಾ ಸಮಿತಿ ಸಭೆಯ ನಡವಳಿಕೆಗಳ ದಿನಾಂಕ 24.5.94.

oo

ಪ್ರಸ್ತಾವನೆ:-

ಖಾಸಗಿ ಶಿಕ್ಷಣ ಸಂಸ್ಥೆಗಳು 1994—95ನೇ ಸಾಲಿನಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸಲ್ಲಿಸಿರುವ ಮನವಿಗಳನ್ನು ದಿನಾಂಕ 24.5.94ರಂದು ನಡೆದ ಪರಿಶೀಲನಾ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಶಾಶ್ವತ ಅನುದಾನ ರಹಿತ ( ಪರ್ಮನೆಂಟಲೀ ವಿದೌಟ್ ಗ್ರಾಂಟ್ಸ್ )ಆಧಾರದ ಮೇಲೆ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

ಆದೇಶ ಸಂಖ್ಯೆ: ಇಡಿ 83 ಎಸ್‌ಹೆಚ್‌ಹೆಚ್ 94, ಬೆಂಗಳೂರು, ದಿನಾಂಕ: 1.6.1994.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 94—95ನೇ ಸಾಲಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರಾತಿ ನೀಡಿ ಆದೇಶಿಸಲಾಗಿದೆ. ಮಂಜೂರು ಮಾಡಲಾದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಆಯಾ ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು ಕೆಳಕಂಡ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ಮತ್ತು ಈ ಷರತ್ತುಗಳನ್ನು ನಮೂದಿಸಿ ಅಗತ್ಯವಾದ ವಿಭಾಗಗಳನ್ನು ನೀಡಿ ಪ್ರತ್ಯೇಕ ಆದೇಶ ನೀಡತಕ್ಕದ್ದು.

ಷರತ್ತುಗಳು:-

1. ಮಂಜೂರಾತಿಯು ಶಾಶ್ವತ ಅನುದಾನ ರಹಿತ ( ಪರ್ಮನೆಂಟಲೀ ವಿದೌಟ್ ಗ್ರಾಂಟ್ಸ್) ಷರತ್ತಿಗೆ ಒಳಪಟ್ಟಿದೆ.
2. ಆಡಳಿತ ಮಂಡಳಿಯವರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಸ್ಥಿರನಿಧಿ ಶುಲ್ಕ, ಹಾಗೂ ಇತರೇ ಮೊಬಲಗನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡತಕ್ಕದ್ದು.
3. ಆಡಳಿತ ಮಂಡಳಿಯವರು ಅಗತ್ಯವಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಹಾಗೂ ಇತರೇ ಅಗತ್ಯವಾದ ಸೌಲಭ್ಯಗಳನ್ನು ಒದಗಿಸತಕ್ಕದ್ದು.
4. ಯಾವುದೇ ಕಾರಣ ಕ್ಕೂ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ.
5. ಈ ಶಿಕ್ಷಣ ಸಂಸ್ಥೆಯವರು ಪದವಿ ಪೂರ್ವ ಕಾಲೇಜು ಮಂಜೂರಾದ ಸ್ಥಳದಲ್ಲಿ ಅದೇ ಸಂಸ್ಥೆಯ ವತಿಯಿಂದ ಪ್ರೌಢಶಾಲೆಯನ್ನು ನಡೆಸುತ್ತಿರಬೇಕು.
6. ಸರ್ಕಾರದ ಜಾರಿಯಲ್ಲಿರುವ ಎಲ್ಲಾ ಆದೇಶಗಳನ್ನು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು.
7. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ( ಶಿಸ್ತು ಮತ್ತು ನಿಯಂತ್ರಣ) ನಿಯಮಗಳು 1978ರ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
8. ಈ ನಿಯಮಗಳನ್ನು ಪಾಲಿಸದಿದ್ದಲ್ಲಿ ಮಂಜೂರಾತಿ ಆದೇಶವನ್ನು ರದ್ದುಪಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

( ಆರ್. ನಾರಾಯಣ )
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

ಪ್ರತಿಗಳು:
1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು
3. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು
4. ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲಾ ವಿಭಾಗಗಳಿಗೆ
5. ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರುಗಳಿಗೆ
6. ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು-1.

ಸಂಖ್ಯೆ: ಅನು1(ಅ) ಹೊ ಶಿ ಕಾ 32 93-94. ದಿನಾಂಕ 24-8-94.

## ಪರಿಪತ್ರ

ವಿಷಯ:- ಬಿಸ್ಮಿಲ್ಲಾ ಎಜುಕೇಷನ್ ಟ್ರಸ್ಟ್, ಬಿಸ್ಮಿಲ್ಲಾ ನಗರ, ಇವರ ವತಿಯಿಂದ ನಡೆಯುತ್ತಿರುವ ಬಿ.ಇ.ಟಿ ಸುಫಿಯಾ ಪ್ರೌಢಶಾಲೆಯನ್ನು 1994-95ನೇ ಸಾಲಿನಿಂದ ಸಂಯುಕ್ತ ಕಿರಿಯ ಕಾಲೇಜಾಗಿ ಪರಿವರ್ತಿಸುವ ಬಗ್ಗೆ.

ಉಲ್ಲೇಖ:- 1 ಸರ್ಕಾರಿ ಆದೇಶ ಸಂಖ್ಯೆ: ಇಡಿ 83 ಎಸ್‌ಹೆಚ್‌ಹೆಚ್ 94, ಬೆಂಗಳೂರು, ದಿನಾಂಕ 1-6-94.

2 ಈ ಕಛೇರಿಯ ವಿಷಯ ತಜ್ಞರ ವರದಿ ದಿನಾಂಕ 16-8-94.

---

ಪ್ರಸ್ತಾವನೆ :-

1994-95ನೇ ಸಾಲಿಗೆ ಖಾಸಗಿ ಪ್ರೌಢ ಶಾಲೆಗಳನ್ನು ಸರ್ಕಾರಿ ಆದೇಶದ ಸಂಖ್ಯೆ: ಇಡಿ 83 ಎಸ್‌ಹೆಚ್‌ಹೆಚ್ 94, ಬೆಂಗಳೂರು, ದಿನಾಂಕ 1-6-94ರ ಪ್ರಕಾರ ಸಂಯುಕ್ತ ಕಿರಿಯ ಕಾಲೇಜುಗಳನ್ನಾಗಿ ಪರಿವರ್ತಿಸಿರುತ್ತಾರೆ. ಸರ್ಕಾರಿ ಆದೇಶದನ್ವಯ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

ಆದೇಶ :-

ಬಿಸ್ಮಿಲ್ಲಾ ಎಜುಕೇಷನಲ್ ಟ್ರಸ್ಟ್, ಇವರ ವತಿಯಿಂದ ಬಿಸ್ಮಿಲ್ಲಾ ನಗರದಲ್ಲಿ ನಡೆಯುತ್ತಿರುವ ಬಿ.ಇ.ಟಿ. ಸುಫಿಯಾ ಪ್ರೌಢ ಶಾಲೆಯನ್ನು 1994-95ನೇ ಸಾಲಿನಿಂದ ಸಂಯುಕ್ತ ಕಿರಿಯ ಕಾಲೇಜಾಗಿ ಕೆಲವು ಷರತ್ತುಗಳಿಗೆ ಒಳಪಟ್ಟಂತೆ ಶಾಶ್ವತ ಅನುದಾನ ರಹಿತವಾಗಿ ಪರಿವರ್ತಿಸಿ ಈ ಕೆಳಕಂಡ ಸಂಯೋಜನೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿದೆ.

ಭಾಗ-1 :- ಭಾಷೆಗಳು:- ಕನ್ನಡ, ಉರ್ದು, ಆಂಗ್ಲ, ಹಿಂದಿ ಮತ್ತು ಸಂಸ್ಕೃತ

ಭಾಗ-2 :- ಕಲಾ ವಿಭಾಗ:- ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ

ವಾಣಿಜ್ಯ ವಿಭಾಗ:- ಇತಿಹಾಸ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ಲೆಕ್ಕಶಾಸ್ತ್ರ

ವಿಜ್ಞಾನ ವಿಭಾಗ:- ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ ಮತ್ತು ಕಂಪ್ಯೂಟರ್ ವಿಜ್ಞಾನ

ಷರತ್ತುಗಳು :-

1. ಈ ಮಂಜೂರಾತಿಯು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿದೆ
2. ಆಡಳಿತ ಮಂಡಳಿಯವರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಸ್ಥಿರನಿಧಿ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಸರ್ಕಾರಕ್ಕೆ ಜಮಾ ಮಾಡುವುದು
3. ಆಡಳಿತ ಮಂಡಳಿಯವರು ಅಗತ್ಯವಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ ಗ್ರಂಥಾಲಯ ಹಾಗೂ ಇತರೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು
4. ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ
5. ಸರ್ಕಾರದ ಜಾರಿಯಲ್ಲಿರುವ ಎಲ್ಲಾ ಆದೇಶಗಳನ್ನು ಹಾಗೂ ನಿಯಮಗಳನ್ನು ಪಾಲಿಸುವುದು
6. ಮೇಲೆ ತಿಳಿಸಿದ ವಿಷಯಗಳಿಗೆ ಮಾತ್ರ ವಿಭಾಗಗಳನ್ನು ತೆರೆಯಲು ಅನುಮತಿ ನೀಡಿದೆ.
7. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮಗಳನ್ನು 1978ರ ನಿಯಮಗಳನ್ನು ತಪ್ಪದೇ ಪಾಲಿಸುವುದು.

....2

8. ಶಾಶ್ವತ ಅನುದಾನ ರಹಿತವಾಗಿ ನಡೆಸುತ್ತೇವೆಂದು ಸಂಸ್ಥೆಯವರು ಮುಚ್ಚಳಿಕೆ ಪತ್ರ ನೀಡಿರುತ್ತಾರೆ.

9. ಅನುದಾನ ಸಂಹಿತೆಯ ನಿಯಮಗಳ ರೀತ್ಯಾ ಎಲ್ಲಾ ನಿಬಂಧನೆಗಳಿಗೂ ಬದ್ಧರಾಗಿರಬೇಕು

10. ಅನುದಾನ ಸಂಹಿತೆಯ ನಿಯಮಗಳ ರೀತ್ಯಾ ಎಲ್ಲಾ ಅಗತ್ಯತೆಗಳನ್ನು ಪೂರೈಸತಕ್ಕದ್ದು

11. ಈ ನಿಯಮಗಳನ್ನು ಪಾಲಿಸದಿದ್ದಲ್ಲಿ ಮಂಜೂರಾತಿ ಆದೇಶವನ್ನು ರದ್ದುಪಡಿಸಲಾಗುವುದು

12. ಈ ಮಂಜೂರಾತಿಯು 1994–95ನೇ ಸಾಲಿನಿಂದ ಜಾರಿಗೆ ಬರುತ್ತದೆ.

ಸಹ ನಿರ್ದೇಶಕರ ಪರವಾಗಿ

ಕರಡು ಪ್ರತಿ ಸಹ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ

ಇವರಿಗೆ:—

1. ಕಾರ್ಯದರ್ಶಿಗಳು, ಬಿಸ್ಮಿಲ್ಲಾ ಎಜುಕೇಷನಲ್ ಟ್ರಸ್ಟ್, ಬಿಸ್ಮಿಲ್ಲಾ ನಗರ, ಬೆಂಗಳೂರು, ಇವರಿಗೆ ಮುಂದಿನ ಕ್ರಮಕ್ಕಾಗಿ.

2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಮಂಡಳಿ, ಅರಮನೆ ರಸ್ತೆ, ಬೆಂಗಳೂರು–1 ಇವರಿಗೆ ಮಾಹಿತಿಗಾಗಿ

3. ಕಛೇರಿ ಪ್ರತಿ

# GOVERNMENT OF KARNATAKA
## (POLICE DEPARTMENT)

OFFICE OF THE POLICE COMMISSIONER
City Special Br.
(Admn)
V.R. Section
BANGALORE CITY-1

NO/CSB/SCH/5813/15&Others

Office of the
Commissioner of Police,
Bangalore City.
Date: 30-12-2015

To:-
The Principal,
Bismillah Educational Trust,
Bismillah Nagar, Bannergatta Road,
B Lore-29

Sub: Verification of Character & Antecedents of Employees.

** *** **

With reference to the above subject, the below mentioned Employees Character and Antecedents were verified in the concerned police station records and the reports are noted below.

| Sl. No. | CSB/SCH No. | Employees Name | Verification Report |
|---|---|---|---|
| 1. | 5813 | Mrs Zeenath Ara<br>w/o md Nazimuddin | There are no adverse remarks in the CCIS & Police IT database |
| | 5814 | Mrs Syedanazia Hussain<br>w/o syued Farooq C K | -do- |
| 3. | 5815 | Mrs Khateeb Rizwana Niubeen<br>w/o Shafiulla SMD | -do- |
| 4. | 5816 | Mr Bhanuprakash U P<br>S/o Puttaswamy Gowda | -do- |
| 5. | 5817 | Mrs Sumaiya Fathima<br>w/o Amanulla Shariff | -do- |
| | 5818 | Mrs Sugra Begum<br>w/o Zulfikar Basheer | -do- |
| | 5819 | Miss Muhammadi Saima Khanum<br>D/o Mohamed Usam Khan | -do- |

| | | | |
|---|---|---|---|
| 8. | 5820 | Mrs Iffath Jathan<br>w/o Syed Mastanalz | There are no adverse remarks in the CCIS & Police IT database |
| 9. | 5821 | Miss Majeeda<br>D/o Basha A | -do- |
| 10. | 5822 | Mrs Shabana Taj<br>w/o Saifulla | -do- |
| 11. | 5823 | Mrs Rizwana Taj<br>w/o Ilyaz Baig | -do- |
| 12. | 5824 | Mrs Faseeha Farheen<br>w/o imran Khan | -do- |
| 13. | 5825 | Mrs Farheena Afreen<br>w/o s M Kabdul Rehaman | -do- |
| 14. | 5826 | Mrs Asma Siddiqua<br>w/o Syed Suhil Ahmed | -do- |
| 15. | 5827 | Mrs Noor Uzma<br>w/o Musthaq Pasha | -do- |
| 16. | 5828 | Mrs Mamatha L Almel<br>w/o L H Almel | -do- |
| 17. | 5829 | Mrs Sayera Uzma<br>w/o Syed Imtiaz Ali | -do- |
| 18. | 5830 | Mr Anand J M<br>S/o J Muniswamy | -do- |
| 19. | 5831 | Mrs Reshma Farhath<br>w/o Md Imtiyaz Ali | -do- |

Note:- These reports are valid for one year from the date of issue.

For Commissioner of Police
Bangaluru City.

For Commissioner of Police
Bengaluru City

# ಉಪ ನಿರ್ದೇಶಕರ ಕಛೇರಿ, ಪದವಿ ಪೂರ್ವ ಹಾಗೂ ವೃತ್ತಿ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡ, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-04

## ಕಾಲೇಜುಗಳಿಗೆ ಅನಿರೀಕ್ಷಿತ ಭೇಟಿ ನೀಡಿದ ವರದಿ

| | | | | | |
|---|---|---|---|---|---|
| 01 | ಕಾಲೇಜಿನ ಹೆಸರು ಮತ್ತು ವಿಳಾಸ | | | | |
| 02 | ಕಾಲೇಜಿನ ಸಂಕೇತ ಸಂಖ್ಯೆ | AS- /ಸರ್ಕಾರಿ/ಅನುದಾನಿತ/ಅನುದಾನರಹಿತ | | | |
| 03 | ಪ್ರಾಂಶುಪಾಲರ ಹೆಸರು | | | | |
| 04 | ಭೇಟಿ ನೀಡಿದ ದಿನಾಂಕ ಮತ್ತು ಸಮಯ | ದಿನಾಂಕ: 17/10/12 ಸಮಯ: 1 PM | | | |
| 05 | ಕಾಲೇಜಿಗೆ ಭೇಟಿ ನೀಡಿದ ಉದ್ದೇಶ | [illegible] | | | |
| 06 | ಕಾಲೇಜಿನಲ್ಲಿ ಹಾಜರಿದ್ದ ಸಿಬ್ಬಂದಿ | [illegible] | | | |
| 07 | ರಜೆ ಪಡೆದ ಸಿಬ್ಬಂದಿ | — | | | |
| 08 | ಅನಧಿಕೃತ ಗೈರು ಹಾಜರಿ ವಿವರ | — | | | |
| 09 | ಉಪನ್ಯಾಸಕರ ಸೇವಾ ಪುಸ್ತಕ ತೆರೆದಿದೆಯೆ, | [illegible] | | | |
| 10 | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಕಲಾ | ವಾಣಿಜ್ಯ | ವಿಜ್ಞಾನ | ಒಟ್ಟು |
| | ಪ್ರಥಮ | 36 | CEBA 60 54 | 15 | [illegible] |
| | ದ್ವಿತಿಯ | 18 | CEBA 42 40 | 10 | 110 |
| 11 | ಕಾಲೇಜಿನ ಫಲಿತಾಂಶ(ಹಿಂದಿನ ವರ್ಷದ್ದು) | ಕಲಾ | ವಾಣಿಜ್ಯ | ವಿಜ್ಞಾನ | ಒಟ್ಟು |
| | ಪ್ರಥಮ | | | | |
| | ದ್ವಿತಿಯ | | | | |
| 12 | ಅನುಪಾಲನಾ ವರದಿಗೆ ನೀಡಿರುವ ಗಡುವು | — | | | |
| 13 | ಅನುಪಾಲನಾ ವಿವರಗಳು | — | | | |
| 14 | ಉಪನಿರ್ದೇಶಕರ ಅಭಿಪ್ರಾಯ | [illegible] | | | |

17.10.12

PRINCIPAL
BET Composite PU College
Bismillah Nagar
BANGALORE - 560 029.

ಪ್ರಾಂಶುಪಾಲರ ಸಹಿ,

ಉಪನಿರ್ದೇಶಕರ ಸಹಿ 17/10/12

## ಉಪನಿರ್ದೇಶಕರ ಕಛೇರಿ, ಪದವಿ ಪೂರ್ವ ಹಾಗೂ ವೃತ್ತಿ ಶಿಕ್ಷಣ ಇಲಾಖೆ,
## ಬೆಂಗಳೂರು ದಕ್ಷಿಣ ಜಿಲ್ಲೆ.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡ, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-04

### ಕಾಲೇಜುಗಳಿಗೆ ಅನಿರೀಕ್ಷಿತ ಭೇಟಿ ನೀಡಿದ ವರದಿ

| | | | | | |
|---|---|---|---|---|---|
| 01 | ಕಾಲೇಜಿನ ಹೆಸರು ಮತ್ತು ವಿಳಾಸ | ಬಿ.ಇ.ಟಿ. ಸಂಯುಕ್ತ ಪದವಿ ಪೂರ್ವ ಕಾಲೇಜು ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ ಬೆಂಗಳೂರು-560029. | | | |
| 02 | ಕಾಲೇಜಿನ ಸಂಕೇತ ಸಂಖ್ಯೆ | AS-221 ಸರ್ಕಾರಿ( ) ಅನುದಾನಿತ(✓) ವಿಭಜಿತ( )ಬೆಂ.ಮ.ಪಾ( ) ಅನುದಾನರಹಿತ( ) | | | |
| 03 | ಪ್ರಾಂಶುಪಾಲರ ಹೆಸರು | Mrs. Zeenath Ara | | | |
| 04 | ಭೇಟಿ ನೀಡಿದ ದಿನಾಂಕ ಮತ್ತು ಸಮಯ | ದಿನಾಂಕ: 11 /11 /2015 ಸಮಯ: 2.30 pm | | | |
| 05 | ಕಾಲೇಜಿಗೆ ಭೇಟಿ ನೀಡಿದ ಉದ್ದೇಶ | ಅನುದಾನಕ್ಕೆ ಸಂಬಂಧಿಸಿದಂತೆ | | | |
| 06 | ಕಾಲೇಜಿನಲ್ಲಿ ಹಾಜರಿದ್ದ ಸಿಬ್ಬಂದಿ | 15 | | | |
| 07 | ರಜೆ ಪಡೆದ ಸಿಬ್ಬಂದಿ | NIL | | | |
| 08 | ಅನಧಿಕೃತ ಗೈರು ಹಾಜರಿ ವಿವರ | — | | | |
| 09 | ಉಪನ್ಯಾಸಕರ ಸೇವಾ ಪುಸ್ತಕ ತೆರೆದಿದೆಯೆ, | ಹೌದು | | | |
| 10 | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಕಲಾ | ವಾಣಿಜ್ಯ | ವಿಜ್ಞಾನ | ಒಟ್ಟು |
| | ಪ್ರಥಮ | 59 | 103 | 44 | 206 |
| | ದ್ವಿತಿಯ | 38 | 98 | 22 | 158 |
| 11 | ಕಾಲೇಜಿನ ಪಲಿತಾಂಶ(ಹಿಂದಿನ ವರ್ಷದ್ದು) | ಕಲಾ | ವಾಣಿಜ್ಯ | ವಿಜ್ಞಾನ | ಒಟ್ಟು |
| | ಪ್ರಥಮ | 98% | 99% | 100% | 98.7% |
| | ದ್ವಿತಿಯ | 70% | 81% | 61% | 75% |
| 12 | ಅನುಪಾಲನಾ ವರದಿಗೆ ನೀಡಿರುವ ಗಡುವು | — | | | |
| 13 | ಅನುಪಾಲನಾ ವಿವರಗಳು | — | | | |
| 14 | ಉಪನಿರ್ದೇಶಕರ ಅಭಿಪ್ರಾಯ | ತೃಪ್ತಿಕರ | | | |

ಪ್ರಾಂಶುಪಾಲರ ಸಹಿ,
PRINCIPAL
BET Composite PU College
Bismillah Nagar
BANGALORE - 560 029

11/11/15
ಉಪನಿರ್ದೇಶಕರ ಸಹಿ
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು ದಕ್ಷಿಣ ಜಿಲ್ಲೆ
ಸರ್ಕಾರಿ ಬಾಲಕಿಯರ ಪ. ಪೂ. ಕಾಲೇಜು
ಬಿ.ಪಿ. ವಾಡಿಯ ರಸ್ತೆ, ಬೆಂಗಳೂರು-560 004.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬಿ.ಇ.ಟಿ. ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ.

ಓದಲಾಗಿದೆ:- 1)ಸರ್ಕಾರದ ಆದೇಶ ಸಂಖ್ಯೆ:ಇಡಿ 59 ಪಿಎಂಸಿ 2006, ದಿ:06-10-2007.

2)ಸರ್ಕಾರದ ಆದೇಶ ಸಂಖ್ಯೆ:ಇಡಿ 217 ಪಿಎಂಸಿ 2008, ದಿನಾಂಕ:08-09-2008.

3)ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿ :17-11-2008.

4)ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಪತ್ರ ಸಂಖ್ಯೆ :ಪಪೂಶಿ/ಸಿಬ್ಬಂದಿ-3/ವೇ ಅನು/ಎಎಸ್-221/2010-11 ದಿನಾಂಕ :08-03-2011.

5) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಪತ್ರ ಸಂಖ್ಯೆ :ಪಪೂಶಿ/ಸಿಬ್ಬಂದಿ-3/ವೇ ಅನು/ಎಎಸ್-221/2010-11 ದಿನಾಂಕ :06-07-2012.

* * * *

ಪ್ರಸ್ತಾವನೆ:-

ರಾಜ್ಯದಲ್ಲಿ ಸಾಮಾನ್ಯ, ಭಾಷಾ/ಮತೀಯ ಅಲ್ಪಸಂಖ್ಯಾತ ವರ್ಗದ ಆಡಳಿತ ಮಂಡಳಿಗಳ ವತಿಯಿಂದ ದಿನಾಂಕ :01-06-1987 ರಿಂದ 94-95ನೇ ಸಾಲಿನವರೆಗೆ ಪ್ರಾರಂಭಿಸಿ, ಸತತವಾಗಿ ನಡೆಸಲಾಗುತ್ತಿರುವ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಮೇಲೆ (1) (2) ಮತ್ತು (3) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಅವಕಾಶ ಕಲ್ಪಿಸಿದ್ದು, ಅದರಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸುವ ಶಿಕ್ಷಣ ಸಂಸ್ಥೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಬಹುದಾಗಿದೆ. ಸರ್ಕಾರದ ಆದೇಶ ಸಂಖ್ಯೆ :ಇಡಿ 83 ಎಸ್‌ಹೆಚ್‌ಹೆಚ್ 1994 ದಿನಾಂಕ :01-06-1994ರಲ್ಲಿ ಬಿಸ್ಮಿಲ್ಲಾ ಶಿಕ್ಷಣ ಟ್ರಸ್ಟ್(ರಿ), ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29 ಇವರಿಗೆ ಬಿ.ಇ.ಟಿ. ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಈ ಪದವಿ ಪೂರ್ವ ಕಾಲೇಜು ಮಂಜೂರಾಗಿರುತ್ತದೆ. ಅದರಂತೆ ಸದರಿ ಸ್ಥಳದಲ್ಲಿ ಪದವಿ ಪೂರ್ವ ಕಾಲೇಜನ್ನು 1994-95ನೇ ಸಾಲಿನಿಂದ ಪ್ರಾರಂಭಿಸಿ, ಯಾವುದೇ ವಿಚ್ಛಿನ್ನತೆ ಇಲ್ಲದೇ ನಡೆಸುತ್ತಾ ಬಂದಿದೆ.

ನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಿನಾಂಕ:06.10.2007 ಮತ್ತು 08-09-2008 ರ ಆದೇಶಗಳಲ್ಲಿನ ಷರತ್ತುಗಳ ಪ್ರಕಾರ ಜಿಲ್ಲಾ ಪರಿಶೀಲನಾ ಸಮಿತಿಯಿಂದ ಈ ಪದವಿ ಪೂರ್ವ ಕಾಲೇಜನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂಬಂಧ, ತಪಾಸಣೆಯನ್ನು ಮಾಡಿಸಿ, ವರದಿಯನ್ನು ಪಡೆದುಕೊಂಡು, ಸದರಿ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಬಿ.ಇ.ಟಿ. ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ. ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಜಿಲ್ಲಾ ಪರಿಶೀಲನಾ ಸಮಿತಿಯ ವರದಿಯನ್ನೊಳಗೊಂಡಂತೆ ಹಾಗೂ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪ್ರಸ್ತಾವನೆಯನ್ನು ಸರ್ಕಾರದ ಆದೇಶ ದಿನಾಂಕ: 06-10-2007 ಮತ್ತು 08-09-2008 ರಲ್ಲಿನ ಷರತ್ತು ಮತ್ತು ನಿಬಂಧನೆಗಳು ಹಾಗೂ ಮಾರ್ಗಸೂಚಿಗಳನ್ವಯ ಮತ್ತು ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಬಗ್ಗೆ ಮೇಲೆ (3) ರಲ್ಲಿ ಹೊರಡಿಸಲಾಗಿರುವ ಸುತ್ತೋಲೆಯನ್ವಯ ಸರ್ಕಾರವು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 55 ಟಿಪಿಯು 2011,**
**ಬೆಂಗಳೂರು, ದಿನಾಂಕ: 10ನೇ ಸೆಪ್ಟೆಂಬರ್ 2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮತೀಯ ಅಲ್ಪಸಂಖ್ಯಾತ ವರ್ಗದ ಆಡಳಿತ ಮಂಡಳಿಯಾದ ಬಿಸ್ಮಿಲ್ಲಾ ಶಿಕ್ಷಣ ಟ್ರಸ್ಟ್(ರಿ), ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29 ಇದರ ವತಿಯಿಂದ ನಡೆಸುತ್ತಿರುವ ಬಿ.ಇ.ಟಿ. ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿಸ್ಮಿಲ್ಲಾ ನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಈ ಪದವಿ ಪೂರ್ವ ಕಾಲೇಜನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ, ಈ ಕೆಳಕಾಣಿಸಿದ 04(ನಾಲ್ಕು) ಉಪನ್ಯಾಸಕರು ಮತ್ತು 01(ಒಂದು) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳೊಂದಿಗೆ ಭವಿಷ್ಯಾನ್ವಯವಾಗಿ ಸಹಾಯಾನುದಾನಕ್ಕೆ ಒಳಪಡಿಸಿ ಆದೇಶಿಸಿದೆ. ಸಹಾಯಾನುದಾನಕ್ಕೆ ಒಳಪಡಿಸಲಾದ ಸಿಬ್ಬಂದಿಯ ವಿವರಗಳು ಕೆಳಕಂಡಂತಿದೆ :-

| ಭೋಧಕ ಸಿಬ್ಬಂದಿ | | | |
|---|---|---|---|
| ಕ್ರ.ಸಂ. | ಹೆಸರು ಶ್ರೀ/ಶ್ರೀಮತಿ | ಪದನಾಮ | ಪ್ರವರ್ಗ |
| 1. | ಝೀನತ್ ಅರಾ | ಉರ್ದು ಭಾಷಾ ಉಪನ್ಯಾಸಕರು | ಈ ಸಂಸ್ಥೆಯು ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಾದ್ದರಿಂದ ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ 8 ಸೆಹಿಮ 1995 ದಿನಾಂಕ :20-06-1995ರನ್ವಯ ಇಲ್ಲಿನ ನೇಮಕಾತಿಗಳಿಗೆ ಮೀಸಲಾತಿ ನಿಯಮಗಳಿಂದ ವಿನಾಯ್ತಿ ಇರುತ್ತದೆ. |
| 2. | ಸಯೀದಾ ನಾಝೀಯಾ ಹುಸೇನ್ | ಅರ್ಥಶಾಸ್ತ್ರ ಉಪನ್ಯಾಸಕರು | |
| 3. | ಖತೀಬ್ ರಿಜ್ವಾನಾ ಮುಬೀನ್ | ಆಂಗ್ಲ ಭಾಷಾ ಉಪನ್ಯಾಸಕರು | |
| 4. | ಭಾನು ಪ್ರಕಾಶ್ | ಇತಿಹಾಸ ಉಪನ್ಯಾಸಕರು | |
| ಬೋಧಕೇತರ ಸಿಬ್ಬಂದಿ | | | |
| 5. | ಶಬಾನಾ ತಾಜ್ | ದ್ವಿತೀಯ ದರ್ಜೆ ಸಹಾಯಕರು | ಅನ್ವಯಿಸುವುದಿಲ್ಲ |

**ಷರತ್ತುಗಳು**

1. ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು, 2006 ರ ನಿಯಮ 21(2) ಮತ್ತು 21(3) ರನ್ವಯ ಸದರಿ ಸಿಬ್ಬಂದಿಗಳು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲವೆಂಬ ಷರತ್ತಿಗೆ ಬದ್ಧನಾಗಿರುತ್ತೇನೆ ಎಂದು ಪ್ರತಿಯೊಬ್ಬ ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡ ನಂತರವೇ ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮುಂದಿನ ಕ್ರಮವಹಿಸತಕ್ಕದ್ದು.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 59 ಪಿ.ಎಂ.ಸಿ. 2006 ದಿನಾಂಕ:6-10-2007 ಮತ್ತು ಇಡಿ 217 ಪಿಎಂಸಿ 2008, ದಿನಾಂಕ :08-09-2008 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 128 ಟಿಪಿಯು 2008, ದಿನಾಂಕ :17-11-2008ರಲ್ಲಿನ ಷರತ್ತು

ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ತಪ್ಪಿದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

3. ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಶಿಕ್ಷಣ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಈ ಪದವಿ ಪೂರ್ವ ಕಾಲೇಜನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ:01-06-1987 ರಿಂದ 94-95ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಅಧಿಕೃತವಾಗಿ ಪ್ರಾರಂಭವಾಗಿರುವುದನ್ನು ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ಆ ರೀತಿ ಆಗಿರದಿದ್ದಲ್ಲಿ ಸಹಾಯಾನುದಾನವನ್ನು ಬಿಡುಗಡೆ ಮಾಡತಕ್ಕದ್ದಲ್ಲ.
4. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿದ ನಂತರ ಯಾವುದೇ ವಿಚ್ಛಿನ್ನತೆ ಇಲ್ಲದೇ ಇದುವರೆವಿಗೂ ಸತತವಾಗಿ ನಡೆದಿರಬೇಕು.
5. ಆಯಾ ಆಡಳಿತ ಮಂಡಳಿಯಲ್ಲಿನ ಎಲ್ಲಾ ಸದಸ್ಯರು ಆಯಾ ಸಾಮಾನ್ಯ/ಹಿಂದುಳಿದ/ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.
6. ಈ ಪದವಿ ಪೂರ್ವ ಕಾಲೇಜು ಪ್ರಾರಂಭವಾದ ದಿನಾಂಕದಿಂದ ಇದುವರೆವಿಗೂ ಮಾನ್ಯತೆಯನ್ನು ಪಡೆದಿರತಕ್ಕದ್ದು. ಹಾಗಿಲ್ಲದಿದ್ದಲ್ಲಿ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದಿದ್ದರೂ ಸಹ ಪದವಿ ಪೂರ್ವ ಕಾಲೇಜು ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆದಿರತಕ್ಕದ್ದು.
7. ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09-10-2006 ರಲ್ಲಿ ನಿಗಧಿಪಡಿಸಿರುವ ಕನಿಷ್ಟ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗ ಶಾಲೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಆಟದ ಮೈದಾನ ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಹಾಗೂ ಕಾಲೇಜಿನ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಮತ್ತು ನಿರ್ಮಲವಾದ ವಾತಾವರಣ ಹೊಂದಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ಉತ್ತಮಗೊಳಿಸುವ ನಿಟ್ಟಿನಲ್ಲಿರುವಂತೆ, ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ಕಾಲಾವಕಾಶದಲ್ಲಿ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.
8. ಪದವಿ ಪೂರ್ವ ಕಾಲೇಜಿಗೆ ದಿನಾಂಕ :01-06-1987 ರಿಂದ 94-95ನೇ ಸಾಲಿನವರೆವಿಗೆ ಮಂಜೂರಾಗಿರುವಂತಹ ವಿಭಾಗಗಳು/ಸಂಯೋಜನೆಗಳನ್ನು ಮಾತ್ರ ಸಹಾಯಾನುದಾನಕ್ಕೆ ಒಳಪಡಿಸತಕ್ಕದ್ದು.
9. ಪ್ರತಿಯೊಂದು ಸಂಯೋಜನೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ :17-11-2008 ರಲ್ಲಿ ನಿಗಧಿಪಡಿಸಿರುವಂತೆ ಕನಿಷ್ಟ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿ ಇರತಕ್ಕದ್ದು ಹಾಗೂ ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.
10. ಸರ್ಕಾರದ ಆದೇಶ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ:09-10-2006 ರಲ್ಲಿ ನಿಗಧಿಪಡಿಸಿರುವ ಮಾದರಿ ಸಿಬ್ಬಂದಿಯಂತೆ ನೇಮಕಾತಿಯನ್ನು ಮಾಡಿಕೊಳ್ಳತಕ್ಕದ್ದು.
11. ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ ಅಂತಹ ಪದವಿ ಪೂರ್ವ ಕಾಲೇಜಿನ ನೌಕರರು ಸಹಾಯಾನುದಾನಕ್ಕೆ ಅರ್ಹತೆ ಪಡೆಯುವುದಿಲ್ಲ.
12. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಮತ್ತು ನಿಯಮಗಳು 1961ರನ್ವಯ ಪ್ರತಿ ವರ್ಷ ಆಡಿಟ್ ನಡೆಸಿ, ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಹಾಗೂ ಶಿಕ್ಷಣ ಇಲಾಖೆಯ ಮಾಹಿತಿಗಾಗಿ ಪಿ.ಟಿ.ಆರ್. ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು (ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಲ್ಪಟ್ಟಿರಬೇಕು) ಸಲ್ಲಿಸತಕ್ಕದ್ದು.

13. ಪ್ರತಿ ವರ್ಷ ಶೈಕ್ಷಣಿಕ ಮಾನ್ಯತೆಯನ್ನು ಸಂಬಂಧಿಸಿದ ನಿಯಮ/ಆದೇಶಗಳನ್ವಯ ನಿಗಧಿಪಡಿಸಿದಂತೆ ಪಡೆಯತಕ್ಕದ್ದು. ಪದವಿ ಪೂರ್ವ ಕಾಲೇಜಿನಲ್ಲಿ ನಿಗಧಿತ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.
14. ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ನಂತರ, ಎಲ್ಲಾ ಷರತ್ತುಗಳನ್ನು ಪೂರೈಸಲಾಗಿದೆಯೇ ಎಂಬುದರ ಬಗ್ಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ತಪಾಸಣೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.
15. ಮೇಲ್ಕಂಡ ಬೋಧಕ/ಬೋಧಕೇತರ ಸಿಬ್ಬಂದಿಯ ವೇತನವನ್ನು ಭವಿಷ್ಯಾನ್ವಯವಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ನಿಯಮಗಳನುಸಾರ ಸಂಬಂಧಿಸಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಟ ಹಂತಕ್ಕೆ ನಿಗಧಿಪಡಿಸಿ ನೀಡತಕ್ಕದ್ದು.
16. ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 90 ಪಿಎಂಸಿ 99, ದಿನಾಂಕ :15-10-99 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ : ಇಡಿ 674 ಎಸ್ಇಡಬ್ಲ್ಯೂ 2005, ದಿನಾಂಕ :10-04-2006 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09-10-2006 ರ ನಿಯಮ 21(2)(3) ರನ್ವಯ ಹಿಂದಿನ ಯಾವುದೇ ಬಾಕಿಗೆ ಈ ಸಿಬ್ಬಂದಿಗಳು ಅರ್ಹರಿರುವುದಿಲ್ಲ. ಇವರ ಹಿಂದಿನ ಅನುದಾನರಹಿತ ಸೇವೆಯನ್ನು ವೇತನ ನಿಗಧಿ, ವೇತನ ಬಡ್ತಿ, ಪಿಂಚಣಿ, ರಜೆ, ಸೇವಾ ಜೇಷ್ಠತೆ ಮತ್ತು ಯಾವುದೇ ಇತರೆ ಸೇವಾ ಸೌಲಭ್ಯಗಳಿಗೆ ಪರಿಗಣಿಸತಕ್ಕದ್ದಲ್ಲ.
17. ಮೇಲ್ಕಂಡ ಸಿಬ್ಬಂದಿಗಳ ವೇತನವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾನ್ವಯವಾಗಿ ಮಾತ್ರ ಬಿಡುಗಡೆ ಮಾಡತಕ್ಕದ್ದು.
18. ಈ ಆದೇಶದಲ್ಲಿ ನಮೂದಿಸಿರುವ ಒಟ್ಟು 04(ನಾಲ್ಕು) ಉಪನ್ಯಾಸಕರು ಹಾಗೂ 01(ಒಂದು) ದ್ವಿತೀಯ ದರ್ಜೆ ಸಹಾಯಕ ಸಿಬ್ಬಂದಿಗಳಿಗೆ ತಗಲುವ ವೆಚ್ಚವನ್ನು 2012-2013ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಒದಗಿಸಿರುವ ಒಟ್ಟಾರೆ ಆಯವ್ಯಯದಲ್ಲಿ, ನಿಗಧಿತ ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ಆಯವ್ಯಯ ಕೋರಬಾರದು. ನಿಗದಿತ ಲೆಕ್ಕ ಶೀರ್ಷಿಕೆಯಡಿಯಲ್ಲಿ ಖರ್ಚು ಹಾಕತಕ್ಕದ್ದು. ಮತ್ತು ಆ ಸಂಬಂಧದ ಲೆಕ್ಕಾಚಾರದ ಸಂಪೂರ್ಣ ವಿವರಗಳನ್ನು 2012-2013ನೇ ಸಾಲಿನ ನಿಗಧಿತ ಚೆಕ್‌ಲಿಸ್ಟ್‌ನಲ್ಲಿ ಭರ್ತಿ ಮಾಡಿ ದೃಢೀಕರಿಸಿಕೊಳ್ಳತಕ್ಕದ್ದು.
19. ದಿನಾಂಕ :01-04-2007 ರಿಂದೀಚೆಗೆ ಸದರಿ ಕಾಲೇಜಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ, ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.
20. ಸಹಾಯಾನುದಾನಕ್ಕೆ ಒಳಪಡಿಸಿರುವ ಈ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿನ ಸಾಮಾನ್ಯ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಿಗೆ ಇರತಕ್ಕದ್ದು. ಪ್ರಸ್ತುತ ಈ ರೀತಿ ಇಲ್ಲದಿದ್ದಲ್ಲಿ, ಸಹಾಯಾನುದಾನಕ್ಕೆ ಒಳಪಡಿಸಿದ ಈ ಆದೇಶ ಹೊರಡಿಸಿದ ದಿನಾಂಕದಿಂದ 02 ವರ್ಷಗಳ ಅಂತ್ಯದಲ್ಲೂ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿ ಮೇಲಿನಂತೆ ನಿಗಧಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೇ ಇದ್ದಲ್ಲಿ, ಸಹಾಯಾನುದಾನವನ್ನು ನಿಲ್ಲಿಸಲಾಗುವುದು.
21. ಈ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಹಾಯಾನುದಾನ ಬಿಡುಗಡೆ ಮಾಡುವ ಮುನ್ನ, ಅವರು ಹೊಂದಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಬಗ್ಗೆ ಹಾಗೂ ಜಾತಿ ದೃಢೀಕರಣ ಪ್ರಮಾಣ ಪತ್ರಗಳ ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ, ಖಚಿತಪಡಿಸಿಕೊಂಡ ನಂತರ ಸಹಾಯಾನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು. ಮುಂದುವರೆದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ

ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ಸಿಂಧುತ್ವ ಪ್ರಮಾಣ ಪತ್ರದ ಮೂಲ ದಾಖಲಾತಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

22. ಕರ್ನಾಟಕ ಶಿಕ್ಷಣ ಅಧಿನಿಯಮ 1983 ಹಾಗೂ ಇದರಡಿಯಲ್ಲಿ ರಚಿಸಲಾದ ಎಲ್ಲಾ ನಿಯಮಾಗಳನ್ನು ಪಾಲಿಸತಕ್ಕದ್ದು.
23. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ, ಬೇರೆ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಲ್ಲಿ ಅಂತಹ ವಿಶ್ವವಿದ್ಯಾಲಯಗಳಿಂದ ಪಡೆದ ಅಂಕಪಟ್ಟಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.
24. ದಿನಾಂಕ:11-09-2006 ರ ಸರ್ಕಾರದ ಪತ್ರ ಸಂಖ್ಯೆ :ಇಡಿ 94 ಎಸ್‌ಇಪಿ 2006 ರನ್ವಯ ರಚಿಸಲಾಗಿರುವ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ ನಿಯಮಗಳು 2005 ನ್ನು ಹಿಂದಿನ ಸೇವಾವಧಿಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.
25. ಮೇಲ್ಕಂಡ ನೌಕರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 1999, ದಿನಾಂಕ :09-10-2006 ರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
26. ಆಡಳಿತ ಮಂಡಳಿಯು ಅನುದಾನ ಸಂಹಿತೆಯ ನಿಯಮಗಳನ್ನು ಹಾಗೂ ಸಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು, ಸೂಚನೆಗಳನ್ನು, ಸುತ್ತೋಲೆಗಳನ್ನು ಮಾರ್ಗಸೂಚಿಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.
27. ಈ ಪದವಿ ಪೂರ್ವ ಕಾಲೇಜಿನಲ್ಲಿ ಮುಂದೆ ಖಾಲಿಯಾಗುವ ಅನುದಾನಿತ ಹುದ್ದೆಗಳನ್ನು ತುಂಬಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.
28. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಉಪನ್ಯಾಸಕರಿಗೆ ನಿಗಧಿತ ಕಾರ್ಯಭಾರವಿದೆಯೇ ಎಂಬ ಬಗ್ಗೆ ಪರಿಶೀಲಿಸಿ, ದಿನಾಂಕ :31-07-2012ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ ಅನುದಾನಕ್ಕೆ ಒಳಪಡಿಸಲಾದ ಈ ಕಾಲೇಜಿನ ಸಿಬ್ಬಂದಿಗಳಿಗೆ 16/20 ಗಂಟೆಗಳ ಕಾರ್ಯಭಾರವಿಲ್ಲದಿದ್ದಲ್ಲಿ ಸದರಿ ಕಾಲೇಜಿನ ಸುತ್ತಮುತ್ತ 25 ಕಿ.ಮೀ. ವ್ಯಾಪ್ತಿಯಲ್ಲಿ 08/10 ಗಂಟೆಗಳ ಕಾರ್ಯಭಾರವಿರುವ ಖಾಲಿ ಹುದ್ದೆಗೆ ನಿಯೋಜಿಸಲು ಆಯುಕ್ತರು/ಜಿಲ್ಲಾ ಉಪ ನಿರ್ದೇಶಕರು ಕ್ರಮವಹಿಸತಕ್ಕದ್ದು.
29. ದಿನಾಂಕ :09-10-2006 ರ ಅಧಿಸೂಚನೆಯ ನಿಯಮ 21(4) ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ:17-11-2008 ರನ್ವಯ ಪರಿಶೀಲಿಸಿ, ಸಹಾಯಾನುದಾನದ ಬಗ್ಗೆ ಕ್ರಮ ವಹಿಸತಕ್ಕದ್ದು.
30. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲಾತಿಗಳು ಅಥವಾ ಮಾಹಿತಿಗಳು ಮುಂದೆ ತಪ್ಪೆಂದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.
31. ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ, ಸೇವಾ ಸೌಲಭ್ಯಗಳು ಇತ್ಯಾದಿಗಳ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಸಹಾಯಾನುದಾನ ಇಲ್ಲದ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ನ್ನು ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಇದಲ್ಲದೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಕಲಂ 92 ರನ್ವಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು, ಅದರನ್ವಯ ವಿಚಾರಣೆ ನಡೆಸದೆ ಸೇವೆಯಿಂದ ವಜಾ ಮಾಡಲು ಅಥವಾ ತೆಗೆದು ಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಆಡಳಿತ ಮಂಡಳಿ ತನ್ನ ನೌಕರರ ವಿರುದ್ಧ ಕ್ರಮತೆಗೆದುಕೊಂಡಿದ್ದಲ್ಲಿ ಅಥವಾ

ತನ್ನ ನೌಕರರಿಗೆ ಮೇಲೆ ಹೇಳಲಾದ ನಿಯಮಗಳನ್ವಯ ದೊರಕಿಸಬೇಕಾದ ಸೇವಾ ಸೌಲಭ್ಯಗಳನ್ನು ದೊರಕಿಸದೆ ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ್ದಲ್ಲಿ, ಆ ಉಲ್ಲಂಘನೆಯ ಕಾರಣಕ್ಕಾಗಿ ಸಂಸ್ಥೆಗೆ ಸಹಾಯಾನುದಾನ ನೀಡತಕ್ಕದ್ದಲ್ಲ.

32. ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ :25/5/2007ರ ಟಿಪ್ಪಣಿ ಸಂಖ್ಯೆ ಆ.ಇ.493/ವೆಚ್ಚ-8/2007ರಲ್ಲಿ, ದಿನಾಂಕ :25/8/2008ರ ಟಿಪ್ಪಣಿ ಸಂಖ್ಯೆ ಆ.ಇ.839/ವೆಚ್ಚ-8/2008, ದಿನಾಂಕ :2/9/2008ರ ಟಿಪ್ಪಣಿ ಸಂಖ್ಯೆ ಆ.ಇ. 871/ವೆಚ್ಚ-8/2008 ಮತ್ತು ಆಇ 26 ವೆಚ್ಚ-8 2012 ದಿನಾಂಕ :22-02-2012 ರನ್ವಯ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯ ದಿನಾಂಕ :31/5/2007ರ ಟಿಪ್ಪಣಿ ಸಂಖ್ಯೆ ಯೋಇ/65/ಜಶ/2007 ಮತ್ತು ದಿನಾಂಕ :26/8/2008ರ ಟಿಪ್ಪಣಿ ಸಂಖ್ಯೆ ಪಿಡಿ 87 ಎಂ ಅಂಡ್ ಇ/2008 ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ ಶಿಇ/1554/ಐಎಫ್ಎಸ್/2012 ದಿನಾಂಕ :02-08-2012 ರನ್ವಯ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

10/09/12
(ಎಸ್.ಹೆಚ್.ಕುರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ).

ಇವರಿಗೆ:-

1. ಮಹಾಲೇಖಪಾಲರು, (ಎ ಅಂಡ್ ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-560 012.
3. ಜಿಲ್ಲಾಧಿಕಾರಿಗಳು, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.
4. ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.
5. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.
6. ಉಪ ವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ(ಆಡಳಿತ), ಶಿಕ್ಷಣ ಇಲಾಖೆ.
8. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.
9. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಆಪ್ತ ಕಾರ್ಯದರ್ಶಿಗಳು, ಕಾರ್ಯದರ್ಶಿಯವರ ಆಪ್ತ ಶಾಖೆ, ಶಿಕ್ಷಣ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು. (ವೆಚ್ಚ-8) ಆರ್ಥಿಕ ಇಲಾಖೆ/ಯೋಜನಾ ಇಲಾಖೆ/(ಪಿಪಿ-1)
12. ಅಧ್ಯಕ್ಷರು/ಕಾರ್ಯದರ್ಶಿಗಳು, ಬಿಸ್ಮಿಲ್ಲಾ ಶಿಕ್ಷಣ ಟ್ರಸ್ಟ್(ರಿ), ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
13. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆರೋಗ್ಯಾಧಿಕಾರಿ(ದಕ್ಷಿಣ)ರವರ ಕಛೇರಿ, 2ನೇಮಹಡಿ, 9ನೇಮುಖ್ಯರಸ್ತೆ, 9ನೇಅಡ್ಡರಸ್ತೆ, 2ನೇಬ್ಲಾಕ್ ಜಯನಗರ, ಬೆಂ-11.

ದೂ.ಸಂ:22975750

ಸಂಖ್ಯೆ:ಆ.ಅ(ದ)/ಪಿಆರ್706/12-13 ದಿನಾಂಕ:-19-05-2012

ಗೆ,

ಬಿ.ಇ.ಟಿ ಪದವಿ ಪೂರ್ವ ಕಾಲೇಜು,
ಬಿಇಟಿ ಸ್ಕೂಲ್ ರಸ್ತೆ,
ಬಿಸ್ಮಿಲ್ಲಾ ನಗರ, ಬಿ.ಜಿ.ರಸ್ತೆ ಕ್ರಾಸ್,
ಬೆಂಗಳೂರು-29

### ನೈರ್ಮಲೀಕರಣ ದೃಢೀಕರಣ ಪತ್ರ

**ವಿಷಯ**:- ಬಿ.ಇ.ಟಿ ಪದವಿ ಪೂರ್ವ ಕಾಲೇಜು, ನೈರ್ಮಲೀಕರಣ ದೃಢೀಕರಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ**:-1. ಬಿ.ಇ.ಟಿ ಪದವಿ ಪೂರ್ವ ಕಾಲೇಜು, ರವರ ಮನವಿ ಪತ್ರದ ದಿನಾಂಕ:-03-05-2012.

2. ವಾರ್ಡ್ 171ರ ಹಿ.ಆ.ಪ(ಜನ)ರವರ ವರದಿ ದಿ:-18-05-2012.

*-*-*-*

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬಿ.ಇ.ಟಿ ಪದವಿ ಪೂರ್ವ ಕಾಲೇಜು, ಬಿಇಟಿ ಸ್ಕೂಲ್ ರಸ್ತೆ, ಬಿಸ್ಮಿಲ್ಲಾ ನಗರ, ಬಿ.ಜಿ.ರಸ್ತೆ ಕ್ರಾಸ್, ಬೆಂಗಳೂರು-29 ಈ ಪದವಿ ಪೂರ್ವ ಕಾಲೇಜಿಗೆ, ವಾರ್ಡಿನ ಹಿರಿಯ ಆರೋಗ್ಯ ಪರಿವೀಕ್ಷಕರು ಭೇಟಿನೀಡಿ ಪರಿಶೀಲಿಸಲಾಗಿ, ಕಾಲೇಜಿನ ಸುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿದೆಯೆಂದು ವರದಿ ನೀಡಿರುವ ಮೇರೆಗೆ 2012-13ನೇ ಸಾಲಿಗೆ ಪದವಿ ಪೂರ್ವ ಕಾಲೇಜು, ನಡೆಸಲು ನೈರ್ಮಲೀಕರಣ ದೃಢೀಕರಣ ಪತ್ರ ನೀಡಲಾಗಿದೆ.

ಆರೋಗ್ಯಾಧಿಕಾರಿ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

19/5/12